ಶ್ರೀ ಧರ್ಮಸಿಂಗ್:– ನಮ್ಮ ಕಮೀಷನರ್ ಇಲ್ಲೇ ಪಕ್ಕದಲ್ಲೇ ಹೇಳುತ್ತಾರೆ. 14ನೇ ಜುಲೈಗೆ ಸ್ಯಾಂಕ್ಷನ್ ಕೊಟ್ಟಿದ್ದೇವೆ. ಸರ್ಕಾರಿ ಜಮೀನು ಅಥವಾ ಖಾಸಗಿ ಲ್ಯಾಂಡೋ ಎಂದು ಐಡೆಂಟಿಫೈ ಮಾಡಲಿಕ್ಕೆ ಅಲ್ಲಿಯ ಸ್ಥಳೀಯ ಅಧಿಕಾರಿಗಳಿಗೆ ಹೇಳುತ್ತೇವೆ. ಈಗ ಮಂಜೂರಾತಿ ಕೊಟ್ಟ ಮೇಲೆ ಹೇಗಾದರೂ ಮಾಡಬೇಕು. ಮಾಡುತ್ತೇನೆ.

ಉಪಾಧ್ಯಕ್ಷರು:– ಮಾನ್ಯ ವಿಶ್ವನಾಥ್ ಪಾಟೀಲ್ ಹೆಬ್ಬಾಳ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 5880
ಸದಸ್ಯರ ಹೆಸರು : ಶ್ರೀ ಪದ್ಮನಾಭ ಕೊಟ್ಟಾರಿ ಕೆ. (ವಿಟ್ಲ)
ಉತ್ತರಿಸುವ ದಿನಾಂಕ : 19.07.2005
ಉತ್ತರಿಸುವ ಸಚಿವರು : ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
ಅ.	2002–2005ನೇ ಸಾಲಿನ ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲೂಕಿನ ಸಜಿಪ ಮುನ್ನೂರು ಎಂಬಲ್ಲಿನ ಏತ ನೀರಾವರಿ ಯೋಜನೆಗಾಗಿ ಮಾಡಿದ ವೆಚ್ಚದ ಒಟ್ಟು ಮೊತ್ತ ಎಷ್ಟು?	ರೂ.63.79ಲಕ್ಷಗಳು
ಆ.	ಈ ಕಾಮಗಾರಿಯಿಂದ ನೀರಾವರಿಗೊಳಪಡುವ ಜಮೀನಿನ ವಿಸ್ತೀರ್ಣ ಎಷ್ಟು?	ವಿಸ್ತೀರ್ಣ 150 ಎಕರೆಗಳು
ಇ.	ಎಷ್ಟು ರೈತ ಕುಟುಂಬಗಳು ಇದರ ಪ್ರಯೋಜನ ಪಡೆಯಲಿವೆ	40 ರೈತ ಕುಟುಂಬಗಳು
ಈ	ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೈಗೊಳ್ಳಲಿರುವ ಏತ ನೀರಾವರಿ ಯೋಜನೆಗಳ ವಿವರಗಳೇನು?	ಸದ್ಯಕ್ಕೆ ಯಾವುದೇ ಪ್ರಸ್ತಾವನೆ ಇಲ್ಲ.

ಶ್ರೀ ಪದ್ಮನಾಭ ಕೊಟ್ಟಾರಿ ಕೆ.:– ಸನ್ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲೂಕಿನ ನನ್ನ ವಿಧಾನಸಭಾ ಕ್ಷೇತ್ರದಲ್ಲಿ ಬರುವಂತಹ ಸಜಿಪ ಮುನ್ನೂರು ಏತ ನೀರಾವರಿ ಯೋಜನೆ, ಸುಮಾರು 35 ವರ್ಷಗಳ ಹಿಂದೆ ನಿರ್ಮಾಣ ಆಗಿರುವಂತಹ ಈ ಏತ ನೀರಾವರಿ ಯೋಜನೆ. ಅದು ಇತ್ತೀಚಿನ ಮೂರು ವರ್ಷಗಳಿಂದ ದುರಸ್ತಿ ಆಗುತ್ತಿದೆ. ಇದಕ್ಕೆ ಎಷ್ಟು ಖರ್ಚಾಗಿದೆ ಎಂದು ಕೇಳಿದ್ದಕ್ಕೆ 63.79 ಲಕ್ಷ ರೂಪಾಯಿ ಖರ್ಚಾಗಿದೆ ಎಂದು ಉತ್ತರ ಕೊಟ್ಟಿದ್ದಾರೆ. ಇದರಿಂದ ಎಷ್ಟು ಎಕರೆಗೆ ನೀರು ಹೋಗುತ್ತಿದೆ? ಎಷ್ಟು ರೈತ ಕುಟುಂಬಕ್ಕೆ ಪ್ರಯೋಜನ ಆಗುತ್ತದೆ ಎಂಬ ಪ್ರಶ್ನೆಗೆ 150 ಎಕರೆಗೆ ನೀರು ಹೋಗುತ್ತಿದೆ. 40 ರೈತ ಕುಟುಂಬಗಳಿಗೆ ಪ್ರಯೋಜನ ಆಗುತ್ತಿದೆ ಎನ್ನುವಂತಹ ಉತ್ತರವನ್ನು ಕೊಟ್ಟಿದ್ದಾರೆ. ಸನ್ಮಾನ್ಯ ಅಧ್ಯಕ್ಷರೆ, ಇಲ್ಲಿ 150 ಎಕರೆಗೆ ನೀರು ಹೋಗುತ್ತಿಲ್ಲ. ಸುಮಾರು 50ರಿಂದ 60 ಎಕರೆಗೆ ಮಾತ್ರ ನೀರು ಹೋಗುತ್ತಿದೆ. ಆದರೆ 40 ಕುಟುಂಬ ಇರಬಹುದು. ಏನು ಎಂದು ಹೇಳಿದರೆ ಈ ಹಳ್ಳಿಯಲ್ಲಿರುವಂತಹ ಇನ್ನು ಈ ಮಧ್ಯದಲ್ಲಿ ಕೆಲವು ರೈತರ ಹತ್ತಿರ ಎಲೆಕ್ಟ್ರಿಕಲ್ ಪಂಪ್‌ಸೆಟ್ಟು ಇದೆ. ಹಾಗಾಗಿ ಅವರು ಆ ಪಂಪ್‌ಸೆಟ್‌ನಿಂದ ನೀರನ್ನು ಉಪಯೋಗಿಸುತ್ತಾರೆ. ಆದರೆ ಇದರ ಮುಖ್ಯ ಪ್ರಯೋಜನ ಸಿಕ್ಕಬೇಕಾದುದು ಹತ್ತಿರದ ಇನ್ನೊಂದು ಹಳ್ಳಿಗೆ. ಸಜಿಪ ಮೂಡ ಎಂದು ಹೇಳುವಂತಹ ಇನ್ನೊಂದು ಹಳ್ಳಿಗೆ ಇದರ ಹೆಚ್ಚಿನ ಪ್ರಯೋಜನ ಸಿಕ್ಕಬೇಕಿದ್ದರೆ ಇದಕ್ಕೆ ಇನ್ನೊಂದು 15–20 ಲಕ್ಷ ರೂಪಾಯಿ ಖರ್ಚು ಮಾಡಿ ಒಂದು ಆ ಗುಡ್ಡ ದಾಟಿಸಿದರೆ ಇನ್ನೊಂದು ಹಳ್ಳಿಯಲ್ಲಿ ಸುಮಾರು 150ರಿಂದ 200 ಎಕರೆಗೆ ಇದರಿಂದ ಪ್ರಯೋಜನ ಬರುತ್ತದೆ. ಆದ ಕಾರಣ ಅದನ್ನು ಸನ್ಮಾನ್ಯ ಸಚಿವರು ಸುಮಾರು ಈ ವರ್ಷದಲ್ಲಿಯೇ 15–20 ಲಕ್ಷ ರೂಪಾಯಿ ಖರ್ಚು ಮಾಡಿದರೆ ಇನ್ನೊಂದು ಇನ್ನೂರು ಎಕರೆಗೆ ನೀರು ಬರುವಂತಹ ವ್ಯವಸ್ಥೆ ಮಾಡಬೇಕೆಂದು ತಮ್ಮ ಮುಖಾಂತರ ಸನ್ಮಾನ್ಯ ಸಚಿವರಲ್ಲಿ ವಿನಂತಿ ಮಾಡುತ್ತಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಮಾನ್ಯ ಜಲಸಂಪನ್ಮೂಲ ಹಾಗೂ ಸಾರಿಗೆ ಸಚಿವರು):– ಈಗಾಗಲೇ ನಾನು ಹೇಳಿದ ಹಾಗೆ 150 ಎಕರೆಗೆ ನೀರಾವರಿ ಆಗುತ್ತದೆಂದು ಹೇಳಿದ್ದೇನೆ. ಆದರೆ ತಾವು ಅಷ್ಟೊಂದು ಎಕರೆಗೆ ನೀರಾವರಿ ಆಗುವುದಿಲ್ಲ ಎನ್ನತಕ್ಕ ವಿಷಯವನ್ನು ಪ್ರಸ್ತಾಪ ಮಾಡಿದ್ದೀರಿ. ಇನ್ನೊಂದು ಇದೇ ಏತ ನೀರಾವರಿ ಯೋಜನೆ ಅಡಿಯಲ್ಲಿ ಇನ್ನು ಎರಡು ಕಿಲೋ ಮೀಟರ್ ಕಾಲುವೆ ತೆಗೆದರೆ ಸುಮಾರು 76 ಎಕರೆಗೆ ಜಮೀನಿಗೆ ನೀರಾವರಿ ಆಗುತ್ತದೆ ಎನ್ನತಕ್ಕ ಮಾತನ್ನು ತಾವು ಪ್ರಸ್ತಾಪ ಮಾಡಿದ್ದೀರಿ. ಇದಕ್ಕೆ ಸುಮಾರು 20 ಲಕ್ಷ ರೂಪಾಯಿ ಬೇಕಾಗುತ್ತದೆ. ಬಹುಶಃ ನೀವು 15–20 ದಿವಸದ ಹಿಂದೆ ಈ ಪ್ರಸ್ತಾವನೆಯನ್ನು ಕೊಟ್ಟಿದ್ದರೆ ಖಂಡಿತವಾಗಿ ನಾನು ಅದನ್ನು ಯಾವುದಾದರೂ ಒಂದು ಬಾಬ್ತಿನಲ್ಲಿ ಸೇರಿಸಿ ಮಾಡಿಸುತ್ತಿದ್ದೆ.

ಆದರೆ ಏನೇ ಆಗಲಿ ಈ 20 ಲಕ್ಷದ ಬಗ್ಗೆ ನಾನು ಮುಂದೆ ಸಪ್ಲಿಮೆಂಟರಿ ಬಜೆಟ್ ಬರುತ್ತದೆ, ಅದರಲ್ಲಿ ಸೇರಿಸಿ ಇದನ್ನು ಪೂರ್ತಿಗೊಳಿಸತಕ್ಕ ಪ್ರಯತ್ನವನ್ನು ಮಾಡುತ್ತೇನೆ.

ಶ್ರೀ ಪದ್ಮನಾಭ ಕೊಟ್ಟಾರಿ ಕೆ:– ಈಗ ಪ್ರಸ್ತಾವನೆಯನ್ನು ಇಲಾಖೆಯ ಮುಖಾಂತರ 6–7 ತಿಂಗಳುಗಳ ಹಿಂದೆ ಸಲ್ಲಿಸಲಾಗಿದೆ. ಆದರೆ ಇನ್ನೂ 70 ಮೀಟರ್ ಕಾಲುವೆ ಮಾಡಿದರೆ ಇದೇ ಹಳ್ಳಿಯಲ್ಲಿ. ಇನ್ನೊಂದು ಪಕ್ಕದ ಸಜಿಪ ಮೂಡದಹಳ್ಳಿಗೆ ನೀರು ಹೋಗಬೇಕಾದ್ದು, ಒಂದು ಗುಡ್ಡ ದಾಟಿ ಅದು ಹೋಗಬೇಕು. ಅದನ್ನು ತಾವು ಆ ಪ್ರಸ್ತಾವನೆ ಬಂದಾಗ ಇಲಾಖೆ ಮುಖಾಂತರ ಸಜಿಪ ಮೂಡದ ಹಳ್ಳಿಗೆ ನೀರು ಕೊಡುವಂತಹದನ್ನು ಮಾಡಬೇಕು ಎಂದು ತಮ್ಮಲ್ಲಿ ಈ ಸಂದರ್ಭದಲ್ಲಿ ನಾನು ಒತ್ತಾಯ ಮಾಡುತ್ತಿದ್ದೇನೆ. ಈ ಬಾರಿಯೇ ಅದಕ್ಕೆ ತಾವು 20 ಲಕ್ಷ ರೂಪಾಯಿಗಳನ್ನು ಒದಗಿಸಬೇಕು ಎಂದು ಹೇಳಿ ಕೂಡ ನಾನು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ:– ತಾವು ಹೇಳಿದ್ದೀರಿ. ಖಂಡಿತವಾಗಿ ಇದು ಜನರಿಗೆ ಉಪಯೋಗ ಆಗುತ್ತದೆ. ಇದನ್ನು ಪರಿಶೀಲನೆ ಮಾಡಿ ಮಾಡೋಣ.

ಶ್ರೀ ಕೆ.ಎಸ್.ಕಿರಣ್ ಕುಮಾರ್:– ಸನ್ಮಾನ್ಯ ಉಪಾಧ್ಯಕ್ಷರೆ, ನಮ್ಮ ಪ್ರಶ್ನೆಗೆ ಉತ್ತರ 5871ಕ್ಕೆ ಬಂದಿಲ್ಲ. ಇವತ್ತೆ ಇದೆ.

ಉಪಾಧ್ಯಕ್ಷರು:– ಅದು ಟ್ರಾನ್ಸ್‌ಫರ್ ಆಗಿದೆ. ಗ್ರಾಮೀಣಾಭಿವೃದ್ಧಿಗೆ ಟ್ರಾನ್ಸ್‌ಫರ್ ಆಗಿದೆ.

ಶ್ರೀ ಕೆ.ಎಸ್.ಕಿರಣ್‌ಕುಮಾರ್:– ಅಲ್ಲ ಉಪಾಧ್ಯಕ್ಷರೆ, ಚುಕ್ಕೆ ಗುರುತಿನ ಪ್ರಶ್ನೆಯನ್ನು ಆ ಇಲಾಖೆಗೆ ವರ್ಗಾಯಿಸಲಾಗಿದೆ ಎಂದು ಹೇಳಿದ್ದಾರೆ. ಆ ಉತ್ತರಗಳು ಬರುತ್ತಿಲ್ಲ. ಈಗಾಗಲೇ ಮೂರನೆಯ ಪ್ರಶ್ನೆ ಸದನದಲ್ಲಿ ಈ ತರಹ ಆಗುತ್ತಿರುವುದು.

ಉಪಾಧ್ಯಕ್ಷರು:– ಮುಂದಿನ ವಾರ ಬರುತ್ತದೆ.

ಶ್ರೀ ಕೆ.ಎಸ್.ಕಿರಣ್ ಕುಮಾರ್:– ಸಾರ್ ಕ್ಲಿಯರ್ ಡೇಟ್ ಆದರು ಯಾವಾಗ ಬರುತ್ತದೆ ಎಂದು ಹೇಳಿ.

ಉಪಾಧ್ಯಕ್ಷರು:– ಮುಂದಿನ ವಾರ ಗ್ರಾಮೀಣಾಭಿವೃದ್ಧಿಯದು ಬರುತ್ತದೆ ಆಗ ತೆಗೆದುಕೊಳ್ಳೋಣ.

ಶ್ರೀ ಕೆ.ಎಸ್.ಕಿರಣ್ ಕುಮಾರ್:– ಯಾವತ್ತು ಎಂದರೆ ಅವತ್ತು ಕೇಳಲು ನಮಗೆ ಅನುಕೂಲವಾಗುತ್ತದೆ.

ಉಪಾಧ್ಯಕ್ಷರು: ಮುಂದಿನ ವಾರ.

ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು (ಡಿ 33ನೆಯ ಪಟ್ಟಿ)

ಶ್ರೀ ಮಲ್ಲಿಕಾರ್ಜುನ ಖರ್ಗೆ (ಮಾನ್ಯ ಜಲಸಂಪನ್ಮೂಲ ಹಾಗು ಸಾರಿಗೆ ಸಚಿವರು)– ಮಾನ್ಯ ಅಧ್ಯಕ್ಷರೆ, ದಿನಾಂಕ 19.7.2005 ರ 33ನೇ ಪಟ್ಟಿಯಲ್ಲಿನ ಲಿಖಿತ ಮೂಲಕ ಉತ್ತರಿಸುವ 109 ಪ್ರಶ್ನೆಗಳ ಪೈಕಿ 81 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಉಪಾಧ್ಯಕ್ಷರು: ಮಂಡಿಸಲಾಯಿತು.

ಚುನಾವಣಾ ಪ್ರಸ್ತಾವ

ಶ್ರೀ ಮಲ್ಲಿಕಾರ್ಜುನ ಖರ್ಗೆ: (ಮಾನ್ಯ ಜಲಸಂಪನ್ಮೂಲ ಹಾಗೂ ಸಾರಿಗೆ ಸಚಿವರು): ಶ್ರೀ ಹೆಚ್.ಕೆ.ಪಾಟೀಲ್ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರ ಪರವಾಗಿ)– ಮಾನ್ಯ ಹೆಚ್.ಕೆ.ಪಾಟೀಲ್ ಅವರ ಚುನಾವಣಾ ಪ್ರಸ್ತಾಪವನ್ನು ನಾನು ಈ ಕೆಳಕಂಡಂತೆ ಮಾಡುತ್ತಿದ್ದೇನೆ.

ಅ) ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ 265 (1)ನೇ ನಿಯಮದ ಅನುಸಾರವಾಗಿ ಈ ಸಭೆ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಗೆ ಹದಿನೈದು ಜನ ಸದಸ್ಯರನ್ನು ಚುನಾಯಿಸಬೇಕೆಂದು ಸೂಚಿಸುವುದು.

ಆ) ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ 268(1) ನೇ ನಿಯಮದ ಅನುಸಾರವಾಗಿ ಈ ಸಭೆ ಅಂದಾಜುಗಳ ಉದ್ದಿಮೆಗಳ ಸಮಿತಿಗೆ ಹದಿನೆಂಟು ಜನ ಸದಸ್ಯರನ್ನು ಚುನಾಯಿಸಬೇಕೆಂದು ಸೂಚಿಸುವುದು.

ಇ) ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ 271(1)ನೇ ನಿಯಮದ ಅನುಸಾರವಾಗಿ ಈ ಸಭೆ ಸಾರ್ವಜನಿಕ ಹುದ್ದಿಮೆಗಳ ಸಮಿತಿಗೆ ಹದಿನೈದು ಜನ ಸದಸ್ಯರನ್ನು ಚುನಾಯಿಸಬೇಕೆಂದು ಸೂಚಿಸುವುದು.

ಈ) ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ 272 (1) ನೇ ನಿಯಮದ ಅನುಸಾರವಾಗಿ ಈ ಸಭೆ ಹಕ್ಕುಬಾಧ್ಯತಾ ಸಮಿತಿಗೆ ಒಂಬತ್ತು ಜನ ಸದಸ್ಯರನ್ನು ಚುನಾಯಿಸಬೇಕೆಂದು ಸೂಚಿಸುವುದು.

ಉ) ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ 277 (1) ನೇ ನಿಯಮದ ಅನುಸಾರವಾಗಿ ಈ ಸಭೆ ಅಧೀನ ಶಾಸನ ರಚನಾ ಸಮಿತಿಗೆ ಹದಿನೈದು ಜನ ಸದಸ್ಯರನ್ನು ಚುನಾಯಿಸಬೇಕೆಂದು ಸೂಚಿಸುವುದು.